ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಬೇರೆ ಬೇರೆ ಉದ್ದೇಶಗಳಿಗಾಗಿ ಮಂಜೂರಾದ ಪರವಾನಗಿಗಳು.

1502(2103)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ): ಮಾನ್ಯ ಗಣಿ ಮತ್ತು ಭೂವಿಜ್ಞಾನ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೇರೆ ಬೇರೆ ಉದ್ದೇಶಗಳಿಗೆ ಮಂಜೂರು ಮಾಡಿದ ಪರವಾನಗಿಗಳ ಸಂಖ್ಯೆ ಎಷ್ಟು; ಅವು ಯಾವುವು? (ವರ್ಷವಾರು ವಿವರ ನೀಡುವುದು)

ಆ) ಇಲ್ಲಿಯತನಕ ಪರವಾನಿಗೆಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು? ಆ ಪೈಕಿ ನೀಡಲಾದ ಪರವಾನಿಗೆಗಳ ಸಂಖ್ಯೆ ಎಷ್ಟು?

ಇ) ಇತ್ಯರ್ಥಗೊಳಿಸದೇ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಇತ್ಯರ್ಥಗೊಳಿಸದಿರಲು ಕಾರಣವೇನು?

ಶ್ರೀ ಎ.ಬಿ.ಪಾಟೀಲ್ (ಮಾನ್ಯ ಗಣಿ ಮತ್ತು ಭೂವಿಜ್ಞಾನ ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಮಂಜೂರು ಮಾಡಿದ ಪರವಾನಿಗೆಗಳ ಸಂಖ್ಯೆ. 5633

ವರ್ಷ	ಅಲಂಕಾರಿಕ ಶಿಲೆ	ಕಟ್ಟಡದ ಕಲ್ಲು	ಸಾಧಾರಣ ಮರಳು	ಸಾಧಾರಣ ಜೇಡಿ ಮಣ್ಣು	ಇಟ್ಟಿಗೆ ಮಣ್ಣು
1996-97	45	1328	382	23	23
1997-98	109	1532	542	51	-
1998-99	61	1043	396	62	-

ಇದಲ್ಲದೆ, 36 ಮುಖ್ಯ ಖನಿಜಗಳಿಗೂ ಗುತ್ತಿಗೆ ನೀಡಲಾಗಿದೆ. (ಸಿಲಿಕಾಸ್ಯಾಂಡ್ -6, ಬೆಣಚ್ಚು-9, ಮಾಲ್ಡಿಂಗ್ ಸ್ಯಾಂಡ್-4 ಕೊರಂಡಂ-1, ಲೈಮ್‌ಶೆಲ್-5, ಕಬ್ಬಿಣ ಮತ್ತು ಮ್ಯಾಂಗನೀಸ್-3, ಮ್ಯಾಂಗನೀಸ್-2, ಹಸಿರು ಬೆಣಚ್ಚು-1 ಕ್ಯಾಲ್ಸೈಟ್-1,

ಕ್ವಾರ್ಟ್ಸ್- 1, ಪೆಲ್‌ಸೈಟ್- 1, ಪೈರೆಕ್ಸ್ ಮತ್ತು ಡಾಲೋಮೈಟ್- 1, ಚಿನ್ನ ಪುಡಿ ತಾಮ್ರ- 1)

ಆ) ಇದುವರೆವಿಗೂ ಪರವಾನಿಗೆಗಾಗಿ ಬಂದ ಅರ್ಜಿಗಳ ಸಂಖ್ಯೆ: 10324 ಪರವಾನಿಗೆಗಾಗಿ ನೀಡಲಾದ ಒಟ್ಟು ಸಂಖ್ಯೆ: 5633.

ಇ) ಇತ್ಯರ್ಥಗೊಳಿಸದೆ ಇರುವ ಅರ್ಜಿಗಳ ಸಂಖ್ಯೆ: 4691 ಗುತ್ತಿಗೆ ನೀಡಲು ಎಲ್ಲಾ ಅರ್ಜಿಗಳಿಗೂ ನಿರಾಕ್ಷೇಪಣಾ ಪತ್ರವು ಬೇಕಾಗಿರುತ್ತದೆ. ಕೆಲವು ಅರ್ಜಿದಾರರು ನ್ಯಾಯಾಲಯದ ತಡೆಯಾಜ್ಞೆಯನ್ನು ಹೊಂದಿದ್ದು ಅರ್ಜಿಯ ವಿಲೇವಾರಿಗೆ ಕಾಲಾವಕಾಶ ಬೇಕಾಗಿರುತ್ತದೆ.

ಬ್ರಹ್ಮಾವರ ಸಕ್ಕರೆ ಕಾರ್ಖಾನೆಯಲ್ಲಿ ಮಂಜೂರಾಗಿರುವ ಹುದ್ದೆಗಳು.

1503(2104)

ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ ಇದಕ್ಕೆ ಒಟ್ಟು ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳ ಸಂಖ್ಯೆ ಎಷ್ಟು; ಆ ಪೈಕಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಕೊರತೆಯಿರುವ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಕಳೆದ 3 ವರ್ಷಗಳಿಂದ ತಾತ್ಕಾಲಿಕ, ದಿನಗೂಲಿ, ಗುತ್ತಿಗೆ ಅಥವಾ ಇನ್ನಾವುದೇ ರೀತಿಯಿಂದ ನೇಮಿಸಿಕೊಂಡ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹೆಸರು, ವಿಳಾಸ ಮತ್ತು ಹುದ್ದೆಯ ವಿವರ ನೀಡುವುದು)

ಶ್ರೀ ಹೆಚ್.ಶಿವಪ್ಪ (ಸಕ್ಕರೆ ಸಚಿವರು):

ಅ) ದಕ್ಷಿಣ ಕನ್ನಡ ಸಹಕಾರ ಸಕ್ಕರೆ ಕಾರ್ಖಾನೆಗೆ ಖಾಯಂ 272, ಹಂಗಾಮಿ 312, ಒಟ್ಟು 584 ವಿವಿಧ ಹುದ್ದೆಗಳು ಮಂಜೂರಿಯಾಗಿರುತ್ತದೆ. ಈ ಪೈಕಿ ಖಾಯಂ 216, ಹಂಗಾಮಿ 17, ದಿನಗೂಲಿ 39 ತರಬೇತಿ 6 ಗುತ್ತಿಗೆ ಆಧಾರದಲ್ಲಿ 10, ಒಟ್ಟು 288 ಜನ ನೌಕರರು ಕಾರ್ಯನಿರ್ವಸಿಸುತ್ತಿರುತ್ತಾರೆ. ಹಾಗೂ ಖಾಯಂ 56, ಹಂಗಾಮಿ 240, ಒಟ್ಟು 296ಗಳ ಹುದ್ದೆಗಳು ಖಾಲಿ ಇರುತ್ತವೆ.

ಆ) ಕಳೆದ 3 ವರ್ಷಗಳಿಂದ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳ ಸಂಖ್ಯೆ ಈ